# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **1772** |
| **ಮಾನ್ಯ ಸದಸ್ಯರ ಹೆಸರು** | : | **ಡಾ: ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **23.03.2026** |
| **ಉತ್ತರಿಸಬೇಕಾದ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.** |

| ಪ್ರಶ್ನೆ ಸಂ | **ಪ್ರಶ್ನೆ** | **ಉತ್ತರ** |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಇರುವ ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಸುತ್ತಿರುವ ಡಯಾಲಿಸಿಸ್ Dialysis ಯಂತ್ರಗಳ ಒಟ್ಟು ಸಂಖ್ಯೆ ಎಷ್ಟು; ಹೆಚ್ಚುತ್ತಿರುವ ಮೂತ್ರಪಿಂಡ ಕಾಯಿಲೆಗಳ ಹಿನ್ನಲೆಯಲ್ಲಿ ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳನ್ನು ಮಂಜೂರು ಮಾಡುವ ಕುರಿತು ಸರ್ಕಾರದ ಮುಂದಿನ ಪ್ರಸ್ತಾವನೆ ಇದೆಯೇ; (ತಾಲ್ಲೂಕುವಾರು ವಿವರ ನೀಡುವುದು) | ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮದಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಯಂತ್ರಗಳ ಒಟ್ಟು ಸಂಖ್ಯೆ:-33.<br><br>ತಾಲ್ಲೂಕುವಾರು ಡಯಾಲಿಸಿಸ್ ಯಂತ್ರಗಳ ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ.<br><br>ಬೀದರ್ ಜಿಲ್ಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳಲ್ಲಿ ಕಾಯ್ದಿರಿಸಿದ ಡಯಾಲಿಸಿಸ್ ರೋಗಿಗಳು ಕಂಡು ಬಂದಲ್ಲಿ 4ನೇ ಪಾಳಿಯಲ್ಲಿ ಸೇವೆಗಳನ್ನು ಒದಗಿಸಲು ಈಗಾಗಲೇ ಕ್ರಮವಹಿಸಲಾಗಿದೆ.<br><br>ಇನ್ನೂ ಹೆಚ್ಚಿನ ಡಯಾಲಿಸಿಸ್ ರೋಗಿಗಳು ಕಂಡುಬಂದಲ್ಲಿ ಹೆಚ್ಚಿನ ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಿ ಡಯಾಲಿಸಿಸ್ ಸೇವೆಗಳನ್ನು ಒದಗಿಸಲು ಕ್ರಮವಹಿಸಲಾಗುತ್ತದೆ. |
| ಆ) | ಜಿಲ್ಲೆಯ ಎಷ್ಟು ತಾಲ್ಲೂಕು ಆಸ್ಪತ್ರೆಗಳಲ್ಲಿ ಸಿಟಿ-ಸ್ಕ್ಯಾನ್ CT-Scan ಸೌಲಭ್ಯ ಲಭ್ಯವಿದೆ; ಸೌಲಭ್ಯ ಇಲ್ಲದ ತಾಲ್ಲೂಕುಗಳಲ್ಲಿ ರೋಗಿಗಳು ಜಿಲ್ಲಾ ಆಸ್ಪತ್ರೆ ಅಥವಾ ಖಾಸಗಿ ಕೇಂದ್ರಗಳಿಗೆ ಹೋಗಬೇಕಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ತೊಂದರೆ ನಿವಾರಿಸಲು ಕೈಗೊಂಡ ಕ್ರಮಗಳೇನು; | ಜನಸಂಖ್ಯೆಗೆ ಅನುಗುಣವಾಗಿ ಜಿಲ್ಲಾಮಟ್ಟದಲ್ಲಿ CT-Scan ಸೌಲಭ್ಯವಿರುತ್ತದೆ. ಬೀದರ್ ಜಿಲ್ಲೆಯಲ್ಲಿ 4 ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿದ್ದು, ಇವುಗಳಲ್ಲಿ CT-Scan ಸೌಲಭ್ಯ ಲಭ್ಯವಿರುವುದಿಲ್ಲ. ಆದುದರಿಂದ ಅವಶ್ಯವಿರುವ ರೋಗಿಗಳನ್ನು ಬ್ರಿಮ್ಸ್ ವೈದ್ಯಕೀಯ ಮಹಾವಿಜ್ಞಾನಗಳ ಆಸ್ಪತ್ರೆ ಬೀದರ್ ಇಲ್ಲಿಗೆ ಪರೀಕ್ಷೆಗಾಗಿ ಕಳುಹಿಸಲಾಗುತ್ತಿದೆ. |
| ಇ) | ಡಯಾಲಿಸಿಸ್ ಹಾಗೂ ಸೀಟಿ-ಸ್ಕ್ಯಾನ್ ಯಂತ್ರೋಪಕರಣಗಳು ಇದ್ದರೂ ತಾಂತ್ರಿಕ ಸಿಬ್ಬಂದಿಗಳಾದ ಟೆಕ್ನಿಷಿಯನ್‌ಗಳು/ ರೇಡಿಯಾಲಜಿಸ್ಟ್ ಗಳ ಕೊರತೆಯಿಂದ ಸೇವೆಗಳ ವ್ಯತ್ಯಸಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಇರುವ ಹುದ್ದೆಗಳ ಸಂಖ್ಯೆಎಷ್ಟು; ಅವುಗಳನ್ನು ಭರ್ತಿಮಾಡಲು ಕೈಗೊಂಡಿರುವ ಕ್ರಮಗಳು ಮತ್ತು ಸಮಯ ಸೀಮೆ ಏನು; | ಡಯಾಲಿಸಿಸ್ ತಾಂತ್ರಿಕ ಸಿಬ್ಬಂದಿಗಳ ಕೊರತೆ ಮತ್ತು ಯಂತ್ರೋಪಕರಣಗಳ ದುರಸ್ತಿಗೊಂಡಿರುವುದಿಲ್ಲ. ಸದರಿ ಕಾರಣಗಳಿಂದ ಡಯಾಲಿಸಿಸ್ ರೋಗಿಗಳಿಗೆ ಡಯಾಲಿಸಿಸ್ ಸೇವೆಗಳು ಸ್ಥಗಿತಗೊಂಡಿರುವ ಪ್ರಕರಣಗಳು ಕಂಡು ಬಂದಿರುವುದಿಲ್ಲ.<br><br>ಮುಂದುವರೆದು ಸಿ.ಟಿ. ಸ್ಕ್ಯಾನ್ ಆಪರೇಟರ್ ಕೊರತೆಯಾಗದಂತೆ ಸಂಬಂಧಪಟ್ಟ ಆಸ್ಪತ್ರೆಯಲ್ಲಿನ ಲಭ್ಯವಿರುವ ಸಂಬಂಧಪಟ್ಟ ತಂತ್ರಜ್ಞರಿಂದ ಸೇವೆಯನ್ನು ಒದಗಿಸಲು ಕ್ರಮಕೈಗೊಳ್ಳಲಾಗಿದೆ. |

ಈ) ಕಳೆದ ಎರಡು ವರ್ಷಗಳಲ್ಲಿ ಸೂಕ್ತ ತಪಾಸಣಾ ಸೌಲಭ್ಯ ಕೊರತೆಯಿಂದ ಸರ್ಕಾರಿ ಆಸ್ಪತ್ರೆಗಳಿಂದ ಖಾಸಗಿ ಆಸ್ಪತ್ರೆಗಳಿಗೆ ವರ್ಗಾವಣೆಗೊಳ್ಳುತ್ತಿರುವ **(Referral Cases)** ರೋಗಿಗಳ ಸಂಖ್ಯೆ ಎಷ್ಟು; ಈರೋಗಿಗಳಿಗೆ ಸರ್ಕಾರದ ಆರೋಗ್ಯ ಭದ್ರತಾಯೋಜನೆಯಡಿ ಆರ್ಥಿಕ ನೆರವು ನೀಡಲಾಗುತ್ತಿದೆಯೇ; (ವರ್ಷವಾರು ವಿವರ ನೀಡುವುದು)

ಬೀದರ್ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಂದ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನಾ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆ (ABPMJAY CM's Ark) ಯಡಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿಂದ ಉನ್ನತ ಚಿಕಿತ್ಸೆಗಾಗಿ ವಿವಿಧ ಕಾರಣಗಳಿಗಾಗಿ ರೆಫರಲ್ ನೀಡಲಾದ ಪ್ರಕರಣಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಹಾಗೂ ಚಿಕಿತ್ಸಾ ವೆಚ್ಚದ ವಿವರ ಕೆಳಕಂಡಂತಿದೆ.

| ಆಸ್ಪತ್ರೆಯ ಹೆಸರು | 2024-25 | | 2025-26 | |
|---|---|---|---|---|
| | ರೋಗಿಗಳ ಸಂಖ್ಯೆ | ವೆಚ್ಚ (ರೂ.ಗಳಲ್ಲಿ) | ರೋಗಿಗಳ ಸಂಖ್ಯೆ | ವೆಚ್ಚ (ರೂ.ಗಳಲ್ಲಿ) |
| ಜಿಲ್ಲಾ ಆಸ್ಪತ್ರೆ ಬೀದರ್ | 179 | 64.94 | 276 | 97.42 |
| ತಾಲ್ಲೂಕು ಆಸ್ಪತ್ರೆ ಬಸವ ಕಲ್ಯಾಣ | 8 | 2.66 | 5 | 2.36 |
| ತಾಲ್ಲೂಕು ಆಸ್ಪತ್ರೆ ಔರಾದ್ | 53 | 19.37 | 25 | 8.92 |
| ತಾಲ್ಲೂಕು ಆಸ್ಪತ್ರೆ ಬಾಲ್ಕಿ | 25 | 8.79 | 18 | 8.23 |
| ತಾಲ್ಲೂಕು ಆಸ್ಪತ್ರೆ ಹುಮ್ನಾಬಾದ್ | 51 | 18.86 | 53 | 18.26 |
| ಒಟ್ಟು | 316 | 114.62 | 377 | 135.19 |

ಉ) ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ MRI, ವೆಂಟಿಲೇಟರ್ ಹಾಗೂ ಇತರ ಆಧುನಿಕ ವೈದ್ಯಕೀಯ ಉಪಕರಣಗಳನ್ನು ಹಂತಹಂತವಾಗಿ ಯಾವುದೇ ಸಮಯದಲ್ಲಿ ಕಾರ್ಯ ಯೋಜನೆ (Time bound Action Plan) ಸರ್ಕಾರ ಹಮ್ಮಿಕೊಂಡಿದೆಯೇ; ಇದ್ದಲ್ಲಿ, ಅದರ ಹಂತವಾರು ಅನುಷ್ಠಾನ ವೇಳಾಪಟ್ಟಿ ಹಾಗೂ ಅಂದಾಜು ವೆಚ್ಚ ಎಷ್ಟು?

ಬೀದರ್ ಜಿಲ್ಲೆಯ ಈ ಕೆಳಕಂಡ 04 ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 28 ವೆಂಟಿಲೇಟರ್‌ಗಳ ಸೇವೆಗಳನ್ನು ಒದಗಿಸಲಾಗುತ್ತಿದೆ.

1. ಬಸವಕಲ್ಯಾಣ - 07
2. ಹುಮನಾಬಾದ್ - 08
3. ಬಾಲ್ಕಿ - 08
4. ಔರಾದ (ಬಿ) - 05

ಆಧುನಿಕ ವೈದ್ಯಕೀಯ ಉಪಕರಣಗಳನ್ನು ಬೇಡಿಕೆಗನುಗುಣವಾಗಿ ಸರಬರಾಜು ಮಾಡಲಾಗಿದ್ದು, ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಉನ್ನತೀಕರಿಸಿದ ಆಧುನಿಕ ವೈದ್ಯಕೀಯ ಉಪಕರಣಗಳ ಅವಶ್ಯಕತೆ/ಬೇಡಿಕೆಗಳಿದ್ದಲ್ಲಿ, ಕ್ರಮವಹಿಸಲಾಗುವುದು.

ಬೀದರ್ ಜಿಲ್ಲೆಯಲ್ಲಿ 4 ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿದ್ದು, MRI ಸೌಲಭ್ಯವನ್ನು ಒದಗಿಸಿರುವುದಿಲ್ಲ.

ಬ್ರಿಮ್ಸ್ ವೈದ್ಯಕೀಯ ಮಹಾ ವಿಜ್ಞಾನಗಳ ಆಸ್ಪತ್ರೆ ಬೀದರ್ ಇಲ್ಲಿ MRI ಸೌಲಭ್ಯವಿದ್ದು, ಅವಶ್ಯಕವಿರುವ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಲಾಗುತ್ತಿದೆ.

ಸಂಖ್ಯೆ: ಆಕುಕ 32 ಎಸ್.ಟಿ.ಕ್ಯೂ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

# ಅನುಬಂಧ-1

| Sl No | ಜಿಲ್ಲೆ | Sl No | ಡಯಾಲಿಸಿಸ್ ಕೇಂದ್ರಗಳು | ಡಯಾಲಿಸಿಸ್ ಯಂತ್ರಗಳ ಸಂಖ್ಯೆ |
|---|---|---|---|---|
| 1 | ಬೀದರ್ | 1 | AURAD | 2 |
| | | 2 | BHALKI | 2 |
| | | 3 | BASAVAKALYAN | 6 |
| | | 4 | HUMNABAD | 5 |
| | | 5 | DISTRICT HOSPITAL BIDAR | 12 |
| | | 6 | 10 BEDDED UPHC BIDAR | 6 |
| TOTAL | | | | 33 |